1527 (2067) ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಅಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆ ಸಂಖ್ಯೆ ಎಷ್ಟು,

ಆ) ಈ ಅಕ್ರಮ ಗಣಿಗಾರಿಕೆಯ ಮಾಲೀಕರ ವಿರುದ್ಧ ಕೈಗೊಂಡಿರುವ ಕ್ರಮವೇನು,

ಇ) ಈಗಲೂ ಸಹ ತಾಲ್ಲೂಕಿನಾದ್ಯಂತ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಇವರ ವಿರುದ್ಧ ಯಾವುದೇ ಕ್ರಮ ಜರುಗಿಸದೇ ಇರುವುದು ನಿಜವಲ್ಲವೇ,

ಈ) ತಾಲ್ಲೂಕಿನಾದ್ಯಂತ ಯಾವುದೇ ಗಣಿಗಾರಿಕೆ ನಡೆಯದಂತೆ ಸರ್ಕಾರವು ಕೈಗೊಂಡಿರುವ ಹೊಸ ನೀತಿಯ ಕಾನೂನು ಕ್ರಮವೇನು,

ಉ) ತಾಲ್ಲೂಕಿನಾದ್ಯಂತ ಪರವಾನಿಗಿ ಪಡೆದು ಗಣಿಗಾರಿಕೆ ನಡೆಯುತ್ತಿರುವ ಮಾಲೀಕರುಗಳಿಂದ ಸರ್ಕಾರಕ್ಕೆ ಬಂದ ಆದಾಯವೇನು, (ವಿವರ ಒದಗಿಸುವುದು)?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ)

ಅ) 1) ಗೌರಿಬಿದನೂರು ತಾಲ್ಲೂಕಿನ ಅರಸಾಲುಬಂಡೆ ಮತ್ತು ಕುಂಟಚಿಕ್ಕನಹಳ್ಳಿ ಗ್ರಾಮದ ಬಳಿ ಈ ಹಿಂದೆ ಕಟ್ಟಡದ ಕಲ್ಲಿಗಾಗಿ ಅನಧಿಕೃತ ಗಣಿಗಾರಿಕೆ ನಡೆದಿದ್ದು, ಈಗ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ

2) ಗೌರಿಬಿದನೂರು ತಾಲ್ಲೂಕಿನ ಹಾಲಗಾನಹಳ್ಳಿ, ರಾಮಾಪುರ, ಚಿಕ್ಕಕುರಗೋಡು, ಹನುಮೇನಹಳ್ಳಿ, ಬಾರ್ಜಾನುಕುಂಟೆ, ಕಾಮಗಾನಹಳ್ಳಿ, ಈರಮ್ಮನಹಳ್ಳಿ, ಕದಿರೇನಹಳ್ಳಿ, ಕೆಂಕೆರೆ ಗ್ರಾಮಗಳ ಬಳಿ ಆಗಿಂದಾಗ್ಗೆ (ಒಟ್ಟು 9 ಗ್ರಾಮಗಳು) ಸಾಧಾರಣ ಮರಳಿಗಾಗಿ ಅಕ್ರಮ ಗಣಿಗಾರಿಕೆ ನಡೆದಿದ್ದು 2005–06 ನೇ ಸಾಲಿನಲ್ಲಿ ಒಟ್ಟು ಭೂ ಮಾಲೀಕರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ

ಆ) ಅಕ್ರಮವಾಗಿ ಕಲ್ಲು ಗಣಿಗಾರಿಕೆಯನ್ನು ನಡೆಸುತ್ತಿರುವ ಮಾಲೀಕರ ವಿರುದ್ಧ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 43 (5) ರಂತೆ ಐದು ಪಟ್ಟು ರಾಜಧನ ಮತ್ತು ದಂಡವನ್ನಾಗಿ ವಸೂಲಿ ಮಾಡಲಾಗುತ್ತಿದೆ

ಹಾಗೂ ಇತ್ತೀಚೆಗೆ ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ಸಂಬಂಧ ಮಾಲೀಕರ ವಿರುದ್ಧ ಐ ಪಿ ಸಿ ಕಲಂ 379 ರ ಪ್ರಕಾರ ಕೇಸ್‌ನ್ನು ದಾಖಲಿಸಲಾಗುತ್ತಿದೆ ವಿವರಗಳನ್ನು ಈ ಕೆಳಗಿನಂತೆ ನೀಡಿದೆ

ಕ್ರಮ ಸಂ	ವರ್ಷ	ತಾಲ್ಲೂಕಿನಲ್ಲಿ ವಸೂಲಿ ಮಾಡಿದ ದಂಡ	ದಾಖಲು ಮಾಡಿರುವ ಕೇಸುಗಳ ಸಂಖ್ಯೆ
1	2005–06	ರೂ 19,58,700/–	96(75 ಪಟ್ಟಾದಾರರು 21 ಲಾರಿಗಳ ಮೇಲೆ)
2	2006–07 (ಫೆಬ್ರವರಿ 07 ರ ಅಂತ್ಯಕ್ಕೆ)	ರೂ 7,07,500/–	– – –

ಇ) ಗೌರಿಬಿದನೂರು ತಾಲ್ಲೂಕಿನಾದ್ಯಂತ ಅಕ್ರಮ ಗಣಿಗಾರಿಕೆ ತಡೆ ಸಂಬಂಧ ತುಂಬಾ ಕಟ್ಟುನಿಟ್ಟಾದ ಕ್ರಮಗಳನ್ನು ಈಗಾಗಲೇ ಜಾರಿಗೊಳಿಸಿದ್ದು, ಕಂದಾಯ ಇಲಾಖೆ, ಆರಕ್ಷಕ ಅಧಿಕಾರಿಗಳು ಮತ್ತು ಇಲಾಖಾ ವತಿಯಿಂದ ಜಂಟೀ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುತ್ತಿದ್ದು, ತಾಲ್ಲೂಕಿನಲ್ಲಿ ಹೆಚ್ಚುವರಿ ಚೆಕ್ ಪೋಸ್ಟ್ ಗಳನ್ನು ಹಾಗೂ ಮೊಬೈಲ್ ಗಸ್ತು ವಾಹನಗಳನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿರುತ್ತದೆ ಅಕ್ರಮ ಸಾಗಾಣಿಕೆಯ ಲಾರಿಗಳ ಹಾಗೂ ಟ್ರಾಕ್ಟರ್‌ಗಳ ಮಾಲೀಕರ ವಿರುದ್ಧ ಎಫ್ ಐ ಆರ್ ದಾಖಲಿಸಲಾಗಿದೆ ಹಾಗೂ ಚಾಲಕರನ್ನು ದಸ್ತಗಿರಿ ಮಾಡಿರುತ್ತದೆ ಗೌರಿಬಿದನೂರು ತಾಲ್ಲೂಕಿನಲ್ಲಿ ಇನ್ನು ಹೆಚ್ಚಿನ ಜಂಟಿ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುತ್ತಿರುವುದರಿಂದ, ಅಕ್ರಮ ಮರಳು ಸಾಗಾಣಿಕೆಯು ಸಂಪೂರ್ಣ ನಿಯಂತ್ರಣದಲ್ಲಿರುತ್ತದೆ

ಈ) ಗೌರಿಬಿದನೂರು ತಾಲ್ಲೂಕಿನಾದ್ಯಂತ ಅಕ್ರಮ ಮರಳು ಸಾಗಾಣಿಕೆ ತಡೆ ಸಂಬಂಧ ಚೆಕ್ ಪೋಸ್ಟ್‌ಗಳನ್ನು ಹಾಗೂ ಮೊಬೈಲ್ ಗಸ್ತು ವಹನಗಳನ್ನು ರಚಿಸಿ, ತುಂಬಾ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಂಡು ಕೆ ಎಂ ಎಂ ಸಿ ಆರ್ 1994 ರ ನಿಯಮಗಳಂತೆ

ಹಗೂ ಐ ಪಿ ಸಿ ಕಲಂ 379 ರಂತೆ ಅಕ್ರಮ ಸಾಗಾಣಿಕೆ ಮೇಲೆ ಕ್ರಮ ಕೈಗೊಳ್ಳಲು ಜಿಲ್ಲೆಯ ಮರಳು ಮಾನಿಟರಿಂಗ್ ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ ಮರಳು ಸಾಗಾಣೆ ಮತ್ತು ಗಣಿಗಾರಿಕೆಯನ್ನು ನಿಯಂತ್ರಿಸಲಾಗಿದೆ

ಊ) ತಾಲ್ಲೂಕಿನಾದ್ಯಂತ ಪರವಾನಗಿ ಪಡೆದು ಗಣಿಗಾರಿಕೆ ನಡೆಯುತ್ತಿರುವ ಮಾಲೀಕರುಗಳಿಂದ 2006–07 ನೇ ಸಾಲಿನಲ್ಲಿ ಒಟ್ಟು ರೂ 105 ಲಕ್ಷಗಳ ರಾಜಧನವನ್ನು ವಸೂಲಿ ಮಾಡಲಾಗಿದೆ ವಿವರಗಳು ಕೆಳಕಂಡಂತಿವೆ

ಗೌರಿಬಿದನೂರು ತಾಲ್ಲೂಕು

ಕ್ರಮ ಸಂ	ಗುತ್ತಿಗೆದಾರರ ಹೆಸರು	ಪಾವತಿಸಿರುವ ರಾಜಧನ
1	ಶ್ರೀ ಯಲ್ಲಪ್ಪ (ಕಟ್ಟಡದ ಕಲ್ಲು)	ರೂ 10,000/–
2	ಮೆ॥ ಜ್ಯೋತಿ ಗ್ರಾನೈಟ್ಸ್ (ಅಲಂಕಾರಿಕ ಶಿಲೆ)	ರೂ 26,275/–
3	ಶ್ರೀ ಎಲ್ ಅನ್ವರ್ (ಮುಖ್ಯ ಖನಿಜ)	ರೂ 68,275/–
	ಒಟ್ಟು	**ರೂ 1,05,000/–**

1528 (2068) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಯಲಹಂಕದಿಂದ – ಸೋಮಂಜಿಪಲ್ಲಿಯ ರಾಜ್ಯ ಹೆದ್ದಾರಿಯು ತುಂಬಾ ಶಿಥಿಲಾವಸ್ಥೆಯಲ್ಲಿದ್ದು, ಸಂಚಾರಕ್ಕೆ ಯೋಗ್ಯವಾಗಿಲ್ಲದೇ ಇದ್ದುದರಿಂದ ಅಪಘಾತಗಳು ಹೆಚ್ಚಿನ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಯಾವುದೇ ಕ್ರಮ ಜರುಗಿಸದೇ ಇರುವುದು ನಿಜವಲ್ಲವೇ,

ಇ) ಈ ರಾಜ್ಯ ಹೆದ್ದಾರಿಯನ್ನು ಸಾರ್ವಜನಿಕರ, ನಾಗರೀಕರ ಹಿತದೃಷ್ಟಿಯಿಂದ ಯಾವಾಗ ಅಭಿವೃದ್ದಿಪಡಿಸಲಾಗುವುದು?